ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ ೭ನೇ ಜನವರಿ ೧೯೯೩, ಪುಷ್ಯ ೧೭, ಶಕ ೧೯೧೪

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೦೦ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : **(ಶ್ರೀಮತಿ ನಾಗಮ್ಮ ಕೇಶವಮೂರ್ತಿ)** ಅವರು

ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಕರ್ನಾಟಕದಲ್ಲಿರುವ ಉಪ ನೋಂದಣಿ ಕಛೇರಿಗಳ ಸಂಖ್ಯೆ

504 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಾಜ್ಯದಲ್ಲಿರುವ ಉಪ ನೋಂದಣಾಧಿಕಾರಿಗಳ ಕಛೇರಿಗಳೆಷ್ಟು?

ಆ) ಇವುಗಳಲ್ಲಿ ಬೆಂಗಳೂರು ಜಿಲ್ಲೆಯಲ್ಲಿರುವ ಕಛೇರಿಗಳೆಷ್ಟು? (ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಬಗ್ಗೆ ಪ್ರತ್ಯೇಕ ವಿವರ ನೀಡುವುದು)

ಇ) ಜಿಲ್ಲೆಯ ಹಾಗೂ ನಗರ ಕಛೇರಿಗಳಿಗೆ ದೂರವಾಣಿ ಸೌಕರ್ಯ ಕಲ್ಪಿಸುವ ಪ್ರಸ್ತಾವನೆ ಇದೆಯೇ?

ಈ) ಕಳೆದ ಒಂದು ವರ್ಷದಲ್ಲಿ ಬೆಂಗಳೂರು ನಗರದಲ್ಲಿ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ವತಿಯಿಂದ ಬಂದಿರುವ ಆದಾಯವೆಷ್ಟು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) 198

ಆ)

1.	ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಕಛೇರಿಗಳು	12
2.	ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಕಛೇರಿಗಳು	8
	ಒಟ್ಟು	**20**

ಇ) ಬೀದರ್ ಮತ್ತು ಕಾರವಾರ ಜಿಲ್ಲೆಗಳ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಗಳನ್ನು ಹೊರತು ಪಡಿಸಿ ಬೇರೆ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಗಳಿಗೆ ದೂರವಾಣಿ ಸೌಕರ್ಯವನ್ನು ಒದಗಿಸಲಾಗಿದೆ. ಆದರೆ ಯಾವ ಉಪ

ನೋಂದಣಾಧಿಕಾರಿಗಳ ಕಛೇರಿಗಳಿಗೂ ದೂರವಾಣಿ ಸೌಲಭ್ಯ ಕಲ್ಪಿಸಿಲ್ಲ. ಇದನ್ನು ಅನುದಾನದ ಲಭ್ಯತೆಯ ಮೇರೆಗೆ ಪರಿಶೀಲಿಸಲಾಗುವುದು.

ಈ) 1982-83ಕೋಟಿ ರೂಪಾಯಿಗಳು. (ನವೆಂಬರ್, 1991ರಿಂದ ಅಕ್ಟೋಬರ್ 1992)

ಶ್ರೀ ಎಂ. ನಾರಾಯಣ ಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಈ ಸ್ಟಾಂಪ್ ಕ್ಯೂಟಿಯಲ್ಲಿ ನಾನು ಕೇಳಿರತಕ್ಕ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಆದರೆ, ಬೆಂಗಳೂರು ಮಟ್ಟಿಗೆ ಮಾತ್ರ ಸ್ಟಾಂಪ್ ಪೇಪರ್ ಸಿಕ್ಕತಕ್ಕಂಥ ಕೆಲಸ ಆಗುತ್ತಿದೆ. ಬೇರೆ ಪಟ್ಟಣದಲ್ಲಿ ಸ್ಟಾಂಪ್ ಪೇಪರ್ ಸ್ಟಾಕ್ ಇಲ್ಲವೆಂದು ಹೇಳುತ್ತಿದ್ದಾರೆ. ಜೊತೆಗೆ, 10 ಸಾವಿರ ಮಟ್ಟಿಗೆ ಸ್ಟಾಂಪ್ ಡ್ಯೂಟಿ ಸಿಕ್ಕುತ್ತಾ ಇದೆ. ಅದರ ಮೇಲೆ ಕೊಡತಕ್ಕಂಥಾದ್ದನ್ನು, ಡೇಟ್ಸ್ ಕೊಟ್ಟು ಕೊಡುತ್ತಿದ್ದಾರೆ ಇದನ್ನು ಸರಿಪಡಿಸತಕ್ಕ ಕೆಲಸ ಮಾಡುವುದಕ್ಕಾಗುತ್ತದೆಯೇ? ಎರಡನೆಯದಾಗಿ, ಗ್ರಾಮಾಂತರ ಪ್ರದೇಶದಲ್ಲಿ, ಏರಿಯಾವೈಸ್‌ಸ್ಟಾಂಪ್ ಡ್ಯೂಟಿಯನ್ನು ಏನು ನಿಗದಿ ಮಾಡಿದ್ದಾರೆ, ಅದು ಸರಿಯಾಗಿಲ್ಲ. ಬಹಳ ಏರಪೇರು ಇದೆ. ಯಾವುದೋ ಒಂದು ಸಂಬಂದಪಟ್ಟ ಸರ್ವೆ ನಂಬರ್ ಇದನ್ನೂ ಸರಿಪಡಿಸತಕ್ಕ ಕೆಲಸ ಮಾಡುತ್ತೀರಾ?

ಶ್ರೀ ಎಂ. ರಾಜಶೇಖರಮೂರ್ತಿ : ಈ ಪ್ರಶ್ನೆ ಇರುವುದು ಎಷ್ಟು ಸಬ್ ರಿಜಿಸ್ಟ್ರಾರ್ ಆಫೀಸುಗಳಿವೆ. ಅವುಗಳಿಗೆ ಟೆಲಿಫೋನ್ ಸಂಪರ್ಕ ಇದೆಯೋ ಇಲ್ಲವೇ ಎಂದು. ಸ್ಟಾಂಪ್ ಪೇಪರ್ ಬಗ್ಗೆ ಸ್ಕೋರ್‌ಸಿಟಿ ಇದೆ. ಅದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಿದರೆ, ಉತ್ತರ ಕೊಡುತ್ತೇನೆ.

ಶ್ರೀ ಎಂ. ನಾರಾಯಣ ಸ್ವಾಮಿ : ನಾನು ಕೇಳಿರತಕ್ಕ ಪ್ರಶ್ನೆ, ಬೆಂಗಳೂರಿಗೆ ಸೀಮಿತವಾಗಿದೆ. ಆದರೂ ಕೂಡ ಇದರಲ್ಲಿ, ಉಪ ಪ್ರಶ್ನೆಯನ್ನು ಕೇಳತಕ್ಕ ಅವಶ್ಯಕತೆ ಇದೆ. ದಯಮಾಡಿ, ಉತ್ತರ ಕೊಡತಕ್ಕ ಕೆಲಸ ಆಗಬೇಕು.

ಉಪಾಧ್ಯಕ್ಷರು : ತಾವು ಏನು ಕೇಳುತ್ತೀರಿ, ಈ ಪ್ರಶ್ನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ, ತಾವು ಬೇರೆ ಪ್ರಶ್ನೆ ಕೇಳಿ, ಅದಕ್ಕೆ ಉತ್ತರ ಕೊಡುತ್ತಾರೆ.

ಬಗರ್ ಹುಕುಂ ಸಾಗುವಳಿಗೆ ಅರ್ಜಿ ಸಲ್ಲಿಸಲು ಕಾಲಾವಕಾಶ

88 - ಶ್ರೀ ಇಳ್ಕಲ್ ವಿಜಯಕುಮಾರ್ (ಹೊಸದುರ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ನಡೆಸಲು ಅರ್ಜಿ ಸಲ್ಲಿಸಿರುವ ಸಂಖ್ಯೆ ಎಷ್ಟು?

ಆ) ಸರ್ಕಾರ ಈ ಹಿಂದೆ ಬಗರ್‌ಹುಕುಂ ಸಾಗುವಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕದ ಪ್ರಚಾರವಿಲ್ಲದೆ ಗ್ರಾಮಾಂತರ ಜನತೆಯ ಗಮನಕ್ಕೆ ಬಾರದಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸರ್ಕಾರದವರು ಅಂತಹ ರೈತರಿಗೆ ಪುನಃ ಅರ್ಜಿಸಲ್ಲಿಸಲು ಕಾಲಾವಕಾಶ ನೀಡುವರೆ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) :

ಅ) 10,86,826

ಆ) ಇಲ್ಲ. ಸಾಕಷ್ಟು ಪ್ರಚಾರವನ್ನು ಕೊಡಲಾಗಿದೆ.